# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 552 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)<br>(ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 20.08.2026. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ 2008-09ನೇ ಸಾಲಿನಲ್ಲಿ ಪ್ರಾರಂಭವಾದ ಅಬಕಾರಿ ಭವನ ನಿರ್ಮಾಣದ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿರುತ್ತದೆ. |
| ಆ) | ಅಬಕಾರಿ ಭವನ ನಿರ್ಮಾಣಕ್ಕೆ ಇದುವರೆಗೆ ಎಷ್ಟು ಮೊತ್ತದ ಅನುದಾನ ಬಿಡುಗಡೆಯಾಗಿದೆ ಮತ್ತು ಎಷ್ಟು ಮೊತ್ತ ಖರ್ಚಾಗಿದೆ; (ಸಂಪೂರ್ಣ ವಿವರ ನೀಡುವುದು) | 2006-07ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳಿಂದ ಅನುಮೋದಿತ 1.70 ಎಕರೆ ಭೂಮಿಯಲ್ಲಿ 2008-09ನೇ ಸಾಲಿನಲ್ಲಿ ರೂ.70.00(ಎಪ್ಪತ್ತು ಲಕ್ಷಗಳ) ಅನುದಾನದಲ್ಲಿ ಕೊಡಗು ಜಿಲ್ಲೆ ಅಬಕಾರಿ ಭವನ ಕಟ್ಟಡದ ನೆಲಮಹಡಿಯನ್ನು ನಿರ್ಮಿಸಲಾಗಿರುತ್ತದೆ. |
| ಇ) | ನೆಲಮಹಡಿಯ ಕಾಮಗಾರಿ ಪೂರ್ಣಗೊಂಡ ನಂತರ ಉಳಿದ ಕಾಮಗಾರಿಯನ್ನು ಮುಂದುವರಿಸದಿರಲು ಕಾರಣವೇನು ಮತ್ತು ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಲು ಪ್ರಸ್ತುತ ಎಷ್ಟು ಅನುದಾನದ ಅಗತ್ಯವಿದೆ ಮತ್ತು ಪರಿಷ್ಕೃತ ಅಂದಾಜು ಸಿದ್ಧಪಡಿಸಲಾಗಿದೆಯೇ; | ಕೊಡಗು ಜಿಲ್ಲೆ ಅಬಕಾರಿ ಭವನ ಕಟ್ಟಡದ ನೆಲಮಹಡಿಯ ನವೀಕರಣ ಕಾಮಗಾರಿ ಒಳಗೊಂಡಂತೆ ಮೊದಲನೇ ಮಹಡಿ ಹಾಗೂ ಎರಡನೇ ಮಹಡಿಗಳನ್ನು ನಿರ್ಮಾಣ, ಪಿಠೋಪಕರಣ ವ್ಯವಸ್ಥೆ, ನೀರು ಸರಬರಾಜು ಮತ್ತು ನೈರ್ಮಲೀಕರಣ ವ್ಯವಸ್ಥೆ, ವಿದ್ಯುತ್ |
| ಈ) | 2008-09ನೇ ಸಾಲಿನಲ್ಲಿ ಯೋಜನೆ ರೂಪಿಸಲಾಗಿದ್ದರೂ ಇದುವರೆಗೆ ಕಾಮಗಾರಿ ಪೂರ್ಣಗೊಳ್ಳದಿರುವುದಕ್ಕೆ ಕಾರಣವೇನು ಹಾಗೂ ಅನುದಾನ ಬಿಡುಗಡೆಗೆ ಇರುವ ತೊಡಕುಗಳೇನು; | ವ್ಯವಸ್ಥೆ,ಸಂಪರ್ಕ ರಸ್ತೆ, ಕಾಂಕ್ರೀಟ್ ಚರಂಡಿ, ಕೌಂಪೌಂಡ್ ನಿರ್ಮಾಣ ಹಾಗೂ ಇತರ ಕಾಮಗಾರಿಗಳನ್ನು ಒಳಗೊಂಡಂತೆ ಅಂದಾಜುಪಟ್ಟಿಯನ್ನು ಪ್ರಸ್ತುತ ಚಾಲ್ತಿಯಲ್ಲಿರುವ |

| | | |
|---|---|---|
| ಉ) | ಅಬಕಾರಿ ಭವನದ ಕಾಮಗಾರಿ ಪೂರ್ಣಗೊಳಿಸಲು ಬಾಕಿ ಇರುವ ಅನುದಾನವನ್ನು ತಕ್ಷಣ ಬಿಡುಗಡೆ ಮಾಡಿ, ನಿಗದಿತ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ? | ಲೋಕೋಪಯೋಗಿ ಇಲಾಖೆ 2023-24ನೇ ಸಾಲಿನ ಏಕರೂಪ ದರಪಟ್ಟಿಯ ದರದಂತೆ ತಯಾರಿಸಿ ಅಂದಾಜು ಮೊತ್ತ ರೂ.650 ಲಕ್ಷಗಳ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.<br>ಸದರಿ ಪ್ರಸ್ತಾವನೆಯ ಕುರಿತು ಕೆಲವೊಂದು ಅಂಶಗಳಿಗೆ ಇಲಾಖೆಯಿಂದ ಸ್ಪಷ್ಟೀಕರಣ ಕೋರಲಾಗಿದ್ದು, ಸ್ಪಷ್ಟೀಕರಣ ಸ್ವೀಕೃತವಾದ ನಂತರ ಅನುದಾನ ಲಭ್ಯತೆ ಮತ್ತು ಆದ್ಯತೆಯನುಸಾರ ಪರಿಶೀಲಿಸಿ ಕ್ರಮವಹಿಸಲಾಗುತ್ತದೆ. |

**ಅಇ 72 ಇಎಲ್‌ಕ್ಯೂ 2026**

(ಕೆ.ಎಂ.ಶಿವಲಿಂಗೇಗೌಡ)
ಅಬಕಾರಿ ಸಚಿವರು